# “ನಾನು ಹಕ್ಕುದಾರನು”

## (22:27, 28)

ರೊಮೆನಿಯದ ವಕೀಲ ವೃತ್ತಿಯ ತರಬೇತು ಪಡೆಯುತ್ತಿದ್ದ ಕ್ರಿಸ್ಟೀನಾ ಬುನಿಯ, ಬುಕಾರಿಸ್ಟನ ಬೀದಿ ಮಕ್ಕಳ ಕುರಿತ ತನ್ನ ಸ್ವಂತ ನಿಯತಕಾಲಿನ ಪತ್ರಿಕೆಯಲ್ಲಿ ಮಾತನಾಡುತ್ತಾ: “ನಾನು ಬಹಳ ಬಹಳ ಕೋಪಗೊಂಡಿದ್ದೇನೆ” ಎಂದು ಹೇಳುವಾಗ, ಅವಳ ಕಣ್ಣುಗಳು ಹೊಳೆ ಯುತ್ತಿದ್ದವು. ನಾವುಗಳು ರೋಗಿಗಳಲ್ಲ. ಮನೆಯ್ಲಿಲ್ಲದವರೂ ಅಲ್ಲ ಹಾಗೂ ರೊಮೆನಿಯದಲ್ಲಿ ನಿರೀಕ್ಷೆ ಕಳಕೊಂಡವರೂ ಅಲ್ಲ, ಎಂದು ಹೇಳಿ, “ನಮ್ಮ ದೇಶದಲ್ಲಿರುವ ಒಳ್ಳೆಯ ಸಂಗತಿಗಳ ಕುರಿತು ಏಕೆ ಒಬ್ಬರೂ ಮಾತನಾಡುತ್ತಿಲ್ಲ?”[1] ಆಕೆ ರೊಮೆನಿಯದ ಸೌಂದರ್ಯದ, ಚರಿತ್ರೆಯ ಭವಿಷ್ಯತ್ತಿನ ಸಾಮರ್ಥ್ಯದ ಬಗ್ಗೆ ಮಾತನಾಡಿದಳು. ರೋಮೆನಿಯದ ಸಮಸ್ಯೆಗಳ ಬಗೆ ಸರಳವಾಗಿ ಒಪ್ಪಿಕೊಂಡಳು - ಪ್ರತಿ ರಾಷ್ಟ್ರವು ತನ್ನದೇ ಆದ ಸಮಸ್ಯೆಯನ್ನು ಹೊಂದಿರುತ್ತದೆ - ಆದಾಗ್ಯೂ ಆಕೆ ರೊಮೆನಿಯದವಳು ಎಂದು ಹೆಮ್ಮೆ ಪಟ್ಟುಕೊಂಡಳು.

ತಮ್ಮ ದೇಶದವರೆಂದು ಹೇಳಿಕೊಳ್ಳುವ ವ್ಯಕ್ತಿಗಳ ಬಗ್ಗೆ ಹೆಮ್ಮೆ ಪಡುತ್ತೇನೆ, ಒಂದು ದೇಶದ ಹಕ್ಕುದಾರರಾಗಿರುವದು ಅಮೂಲ್ಯವಾದ ವರದಾನವಾಗಿದೆ, ಆದರೆ ಅನೇಕ ಸಾರಿ ಅದು ಅಲಕ್ಷಕ್ಕೆ ಒಳಗಾಗುತ್ತದೆ. ಈ ಪಾಠದಲ್ಲಿ ಹಕ್ಕುದಾರನ ಬಗ್ಗೆ ಕಲಿಯಲಿದ್ದೇವೆ: ಒಬ್ಬ ನಾಗರೀ ಕನ ಹಕ್ಕು ಬಾಧ್ಯತೆ ಹಾಗೂ ಹೊಣೆಗಾರಿಕೆಯ ಕುರಿತು ನೋಡುತ್ತೇವೆ.[2]

ಅಪೊಸ್ತಲರ ಕೃತ್ಯದಲ್ಲಿ ಪೌಲನು ತಾನು ರೋಮಾಯದ ಹಕ್ಕುದಾರನು ಎಂದು ತಿಳಿಸಿದನು.[3] ಪೌಲ ಸೀಲರನ್ನು ನ್ಯಾಯ ಸಮ್ಮತವಿಲ್ಲದೆ ಫಿಲಿಪ್ಪಿಯ ಸೆರೆಮನೆಗೆ ಹಾಕಲ್ಪಟ್ಟಾಗ, ಮತ್ತು ಆ ಸಮಯದಲ್ಲಿ ಅವರನ್ನು ಬಿಡುಗಡೆ ಗೊಳಿಸಲು ಬಂದಂಥ ಜನರಿಗೆ - “ಅವರು ವಿಚಾರಣೆ ಮಾಡದೆ ರೋಮಾಪುರದ ಹಕ್ಕುದಾರರಾದ ನಮ್ಮನ್ನು ಎಲ್ಲರ ಮುಂದೆ ಹೊಡಿಸಿ ಸೆರೆಮನೆಗೆ ಹಾಕಿದರು; ಈಗ ನಮ್ಮನ್ನು ಗುಪ್ತವಾಗಿ ಹೊರಗೆ ಕಳುಹಿಸುತ್ತಾರೋ? ಹಾಗೆ ಎಂದೂ ಆಗಕೂಡದು; ಅವರೇ ಬಂದು ನಮ್ಮನ್ನು ಹೊರಗೆ ಕರಕೊಂಡು ಹೋದರೆ ಸರಿ ಎಂದು ಹೇಳಿದನು” (16:37).

> ಜವಾನರು ಈ ಮಾತುಗಳನ್ನು ಅಧಿಪತಿಗಳಿಗೆ ತಿಳಿಸಿದಾಗ ರೋಮಾಪುರ ಹಕ್ಕುದಾರರು ಎಂಬ ಮಾತನ್ನು ಅವರು ಕೇಳಿ ಭಯಪಟ್ಟರು; ಮತ್ತು ಅವರ ಬಳಿಗೆ ಹೋಗಿ ವಿನಯ ವಾಗಿ ಮಾತಾಡಿ ಹೊರಕ್ಕೆ ಕರೆದುಕೊಂಡು ಬಂದು - ನೀವು ಊರನ್ನು ಬಿಟ್ಟು ಹೋಗ ಬೇಕೆಂದು ಬೇಡಿ ಕೊಂಡರು. ಆಗ ಅವರು ಸೆರೆಮನೆಯೊಳಗಿನಿಂದ ಹೊರಟು ಲುದ್ಯಳ ಮನೆಗೆ ಬಂದು ಸಹೋದರರನ್ನು ನೋಡಿ ಅವರನ್ನು ಧೈರ್ಯಗೊಳಿಸಿ ಹೊರಟು ಹೋದರು (16:38, 39).[4]

ಸಹಸ್ರಾಧಿಪತಿಯು ತಿಳುಕೊಳ್ಳುವದಕ್ಕಾಗಿ ಅವರನ್ನು ಕೋಟೆಯೊಳಗೆ ತಂದು “ಕೊರಡೆಗಳಿಂದ ಹೊಡೆದು ವಿಚಾರಿಸಬೇಕೆಂದು ಆಜ್ಞಾಪಿಸಿದನು” (22:24ಬಿ), ಆದರೆ ಪೌಲನು ಅವನ ಹತ್ತಿರ ನಿಂತಿದ್ದ ಶತಾಧಿಪತಿಗೆ - ರೋಮಾಪುರದ ಹಕ್ಕುದಾರನಾದ ಮನುಷ್ಯನನ್ನು ನ್ಯಾಯವಿಚಾರಣೆ ಮಾಡದೆ ಕೊರಡೆಗಳಿಂದ ಹೊಡಿಸುವದು ನಿಮಗೆ ನ್ಯಾಯವೋ? ಎಂದು ಕೇಳಿದನು (22:25ಬಿ). ಪೌಲನ ಈ ವಿಷಯವನ್ನು ಅರಿತ ಸಹಾಸ್ರಾಧಿಪತಿಯು ಸಂದೇಹವುಳ್ಳವನಾದನು:

> ಈ ಮನುಷ್ಯನು ರೋಮಾಪುರ ಹಕ್ಕುದಾರನು ಎಂದು ಹೇಳಲು ಸಹಸ್ರಾಧಿಪತಿಯು ಪೌಲನ ಹತ್ತರಕ್ಕೆ ಬಂದು - ನೀನು ರೋಮಾಪುರದವರ ಹಕ್ಕುಳ್ಳವನೇನು? ನನಗೆ ಹೇಳು ಎಂದು ಅವನನ್ನು ಕೇಳಿದನು. ಅವನು, ಹೌದು ಅಂದನು. ಅದಕ್ಕೆ ಸಹ ಸ್ರಾಧಿಪತಿಯು - ನಾನು ಬಹಳ ಹಣಕೊಟ್ಟು ಆ ಹಕ್ಕನ್ನು ಕೊಂಡು ಕೊಂಡೆನು ಅನ್ನಲು ಪೌಲನು - ನಾನಾದರೋ ಹಕ್ಕುದಾರನಾಗಿ ಹುಟ್ಟಿದವನು ಅಂದನು (22:27, 28).[5]

ಹೇಗೂ, ಪೌಲನು ರೋಮಾಯದ ಹಕ್ಕುದಾರನು ಎಂದು ತಿಳಿದ ನಂತರ, ಅವನನ್ನು ತಕ್ಷಣವೇ ಬಿಡುಗಡೆಗೊಳಿಸಲು ಸಾಧ್ಯವಾಗಲಿಲ್ಲ. ಈ ವಿಷಯವನ್ನು ತಿಳಿದ "ಸಹಸ್ರಾಧಿಪತಿಗೆ, ತಾನು ಅವನನ್ನು ಕಟ್ಟಿಸಿದ್ದರಿಂದ ಅವನಿಗೂ ಭಯಹಿಡಿಯಿತು" (22:29ಬಿ).

ದೇಶಾಧಿಪತಿಯಾದ ಫೆಸ್ತನು, ಪೌಲನನ್ನು ವಿಚಾರಣೆಗಾಗಿ ಯೆರೂಸಲೇಮಿಗೆ ಕಳುಹಿಸಿದಾಗ (ಆ ಪ್ರಯಾಣವು ಪೌಲನ ಆರೋಗ್ಯಕ್ಕೆ ಯೋಗ್ಯವಾಗಿರಲಿಲ್ಲ), "ಆದರೆ ನಾನು ಚಕ್ರವರ್ತಿಯ ಎದುರಿನಲ್ಲಿ ಹೇಳಿಕೊಳ್ಳುತ್ತೇನೆ ಎಂದು ಹೇಳಿದನು" (25:11ಸಿ).[6]

ಈ ಕಥೆಯಲ್ಲಿ ಹಕ್ಕುದಾರರಾಗಿರುವ ಅವಕಾಶವನ್ನು ಹಾಗೂ ಕ್ರೈಸ್ತರ ಹಕ್ಕಿನ ಅವಕಾಶದ ಕುರಿತಾಗಿ ನೋಡುತ್ತೇವೆ. ಪೌಲನ ಜೀವಿತದಲ್ಲಿನ ಈ ವಿಚಾರವನ್ನು ಧ್ಯಾನ ಮಾಡುವಾಗ, ನಾವು ಯಾವ ಸಂದರ್ಭದಲ್ಲಿ, ಹಕ್ಕನ್ನು ಚಲಾಯಿಸಬಹುದು ಹಾಗೂ ಚಲಾಯಿಸಬಾರದು ಎಂದು ಅರಿಯುತ್ತೇವೆ. ಹಾಗೂ ಹಕ್ಕುದಾರರ ಹೊಣೆಯ ಕುರಿತಾಗಿಯು ಧ್ಯಾನಿಸಲಿದ್ದೇವೆ.

## ಒಬ್ಬ ನಾಗರೀಕನ ಹಕ್ಕುಗಳು

ಹೊಸ ಒಡಂಬಡಿಕೆಯ ಕಾಲದಲ್ಲಿ, ರೋಮಾಪುರದ ಹಕ್ಕುದಾರರಾಗಿರುವದು ಪ್ರತಿಷ್ಟೆಯ ಅಂಶವಾಗಿತ್ತು. ಏಕೆಂದರೆ, "ಸಹಸ್ರಾದಿಪತಿಯು - ನಾನು ಬಹಳ ಹಣಕೊಟ್ಟು ಆ ಹಕ್ಕನ್ನು ಕೊಂಡು ಕೊಂಡೆನು ಎಂಬ ಹೇಳಿಕೆಯ ಸಹಜ ಸ್ಥಿತಿಯನ್ನು ಗಮನಿಸುತ್ತೇವೆ" (22:28ಎ). ಪ್ರತಿಯೊಬ್ಬರು ರೋಮಾಯದ ಹಕ್ಕಿನಲ್ಲಿ ಆನಂದಿಸಲಿಲ್ಲ. ಪೌಲನು ರೋಮಾಪುರದ ಹಕ್ಕುದಾರನಾಗಿ ...

> ... ಒಂದು ಪಟ್ಟಣದಲ್ಲಿ ಮಾತ್ರವಲ್ಲದೆ, ರೋಮಾಯದ ಪ್ರತಿ ಪಟ್ಟಣಗಳಲ್ಲೂ ಅವನು ಹಕ್ಕು ಬಾಧ್ಯತೆಗಳನ್ನು ಹೊಂದಿದ್ದನು. ಅವುಗಳು ಎಂಥವುಗಳಾಗಿದ್ದವು ಎಂಬ ವಿವರಣೆಯು ಇರುವದಿಲ್ಲ ... ಆದರೆ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದಿತ್ತು, ಚಡಿ ಏಟುಗಳಿಂದ ದೊಣ್ಣೆಯ ಪೆಟ್ಟಿನಿಂದ, ಹಾಗೂ ಕ್ರೂಜೆಯ ಶಿಕ್ಷೆಯಿಂದ, ಪ್ರತಿ ರೋಮಾಯರು ಪಾರಾಗ ಬಹುದಿತ್ತು; ಹಾಗೂ ಚಕ್ರವರ್ತಿಯ ಮುಂದೆ ಕೆಲವು ಪಿರ್ಯಾದುಗಳನ್ನು ಹೇಳಿಕೊಳ್ಳುವ ಹಕ್ಕುನ್ನು ಹೊಂದಿದ್ದರು.[7]

ರೋಮಾಯರ ಅನೇಕ ಹಕ್ಕುಗಳು ಕಾನೂನಿಗೆ ಸಂಬಂಧಪಟ್ಟಿದ್ದವು, ಹಾಗೂ ವಿಚಾರಣೆಯ ವಿಷಯಕ್ಕೂ ಸಂಬಂಧಿಸಿದ್ದವು ಅವರ ವಿಚಾರಣೆಗೆ ಕಾರಣವನ್ನು ಕೇಳುವ ಹಕ್ಕನ್ನೂ ಅರೋಪಮಾಡಿದವರನ್ನು ಎದುರಿಸುವ ಹಕ್ಕುನ್ನು ಹೊಂದಿದ್ದರು (25:16) - ಅದರ ಸಂಗಡ ರೋಮಾಪುರದಲ್ಲಿ ಅವನಿಗೆ ಅನ್ಯಾಯವಾಗಿದೆ ಎಂಬ ಅಫೀಲನ್ನು ಮಾಡಬಹುದಿತ್ತು (25:10-12). ನಮ್ಮಲ್ಲಿ ಕೆಲವರು ಇಂತಹ ಹಕ್ಕುಗಳನ್ನು ನಿರ್ಲಕ್ಷ ಮಾಡು ತ್ತೇವೆ, ಆದರೆ ಪೌಲನಿಗೆ ಅವುಗಳು ಬಹು ಪ್ರಮುಖವಾಗಿದ್ದವು.[8] J. W. ಮ್ಯಾಕ್ ಗಾರ್ವೆಯವರ ಪ್ರಕಾರ, "ಒಂದು ನಿರ್ಜನ ಪ್ರದೇಶದಲ್ಲಿ, ಸೆರೆಮನೆಯ ಗೋಡೆಗಳ ನಡುವೆ, ಹಿಂಸೆಯನ್ನು ಹೊಂದುವಾಗಲು," ನಾನು ರೋಮಾಪುರದ ಹಕ್ಕುದಾರನು, ಎಂದು ಪೌಲನು ಕಾನೂನು ಪ್ರಕಾರ ತನ್ನ ಹಕ್ಕನು ಮೆಚ್ಚಿಕೊಂಡನು.[9] ಪೌಲನ ಈ ಮಾತುಗಳ ಬಗ್ಗೆ R. B. ರೆಕ್

ಹಾಮ್‌ರವರು ಸಹ "ನಾನು ಕೈಸರನಲ್ಲಿ ಅಫೀಲು ಮಾಡುತ್ತೇನೆ" (*ಕೈಸರೆಯದ ಅಪೆಲೊ*): "ಈ ಎರಡು ಮಾತುಗಳನ್ನು ಉಚ್ಚರಿಸುವ ಮೂಲಕ ಪೌಲನು ಯೆಹೂದ್ಯರ ಮುಷ್ಟಿಯಿಂದ ಪಾರಾದನು."[10]

ಪೌಲನ ರೋಮಾಪುರದ ಪೌರತ್ವದ ಕುರಿತು ಆಲೋಚಿಸುವಾಗ, ಒಂದು ಗೊಂದಲವನ್ನು ಗಮನಿಸುತ್ತೇವೆ. ಕೆಲವು ಸಾರಿ ತನ್ನ ಹಕ್ಕನ್ನು ಪ್ರತಿಪಾದಿಸಿದರೂ, ಕೆಲವು ಸಾರಿ ಸಹಜವಾಗಿ ಪ್ರತಿಪಾದಿಸಲಿಲ್ಲ. ಅಪೊಸ್ತಲರ ಕೃತ್ಯಗಳು 16, 22 ಮತ್ತು 25ರ ಪ್ರಕಾರ, ಯಾವುದೋ ಒಂದು ಸಂದರ್ಭದಲ್ಲಿ ಮಾತ್ರ ತನ್ನ ಹಕ್ಕನ್ನು ಚಲಾಯಿಸಿದನು. ಅನೇಕ ಸಂದರ್ಭಗಳಲ್ಲಿ ತನ್ನ ಹಕ್ಕನ್ನು ಚಲಾಯಿಸಲಿಲ್ಲ.

ಒಂದು ಸಾರಿ ಪೌಲನು ಅನುಭವಿಸಿದ ನಿಂದನೆಯ ಬಗ್ಗೆ ಆಲೋಚಿಸಿರಿ. "ಲೆಕ್ಕವಿಲ್ಲದಷ್ಟು ಸಾರಿ, ಪೆಟ್ಟುಗಳನ್ನು" ಉದಾಹರಣೆಗೆ ಎರಡು ಬಾರಿ ಹೊಂದಿದಾಗ, "ಐದು ಸಾರಿ ಯೆಹೂದ್ಯರಿಂದ ನನಗೆ ಒಂದು ಕಡಿಮೆ ನಾಲ್ವತ್ತು ಏಟುಗಳು ಬಿದ್ದವು. ಮೂರು ಸಾರಿ ಚಡಿಗಳಿಂದ ಹೊಡಿಸಿದರು" (2 ಕೊರಿಂಥ 11:23-25). ಇದು ರೋಮಾಯರ ಪದ್ಧತಿಯಾಗಿತ್ತು ಅಪೊಸ್ತಲರ ಕೃತ್ಯಗಳು 16:22, 23ರಲ್ಲಿ, ರೋಮಾ ಸರಕಾರದವರು ಫಿಲಿಪ್ಪಿಯಲ್ಲಿ ಪೌಲನಿಗೆ ಚಡಿಗಳಿಂದ ಹೊಡೆದರು, ಇನ್ನು ಎರಡು ಸಂದರ್ಭಗಳನ್ನು ಲೂಕನು ದಾಖಲು ಮಾಡಿರುವದಿಲ್ಲ.

ಅಪೊಸ್ತಲರ ಕೃತ್ಯಗಳು 16ರಲ್ಲಿನ ಪೌಲನು ಹೊಂದಿದ ಪೆಟ್ಟುಗಳನ್ನು ನೋಡುವಾಗ, ನಮ್ಮಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ ... ಪೌಲ ಸಿಲ್ವಾನರು ತಾವು ರೋಮಾಯದ ಹಕ್ಕುದಾರರೆಂದು ಏಕೆ ಪ್ರದಿಪಾದಿಸಲಿಲ್ಲ, ಮತ್ತು ಈ ಕಾರಣದಿಂದ ಅವರುಗಳು ತಪ್ಪಿಸಿಕೊಳ್ಳುವ ಸಾಧ್ಯತೆ ಇರಲಿಲ್ಲವೇ? "ಒಂದು ವೇಳೆ ಅವರು ಪ್ರಯತ್ನಿಸಿದ್ದರೂ, ಸಂದರ್ಭವು ಗೊಂದಲಮಯವಾ ಗಿದದ್ದರಿಂದ, ಅಧಿಕಾರಿಗಳು ಅವರ ಸ್ವರವನ್ನು ಆಲಿಸದೆ ಇರಬಹುದು."[11] ಆ ಮನುಷ್ಯರು ಪೌಲನನ್ನು - ಹೊಡೆಯಲು ಸಿದ್ಧರಾಗುವಾಗ ಈ ಕ್ರಿಯೆ ನಡೆದಿರಬಹುದು. ಅಥವಾ ಇತರೆ ಮೂರು ಸಂದರ್ಭಗಳಲ್ಲೂ ಇದೇ ರೀತಿಯಾಗಿ ನಡೆದಿರಬಹುದೇ? ಒಂದು ವೇಳೆ ಆಗಿರಬಹುದು. ಆದರೆ ಯಾವುದೇ ಒಂದು ಭಲವಾದ ಕಾರಣದಿಂದ ಪೌಲನು ತನ್ನ ರೋಮಾಪುರದ ಹಕ್ಕನ್ನು ಚಲಾಯಿಸದೆ ಇರಬಹುದು ಎಂದು ನಾವುಗಳು ಅರಿಯಬೇಕು.

ಪೌಲನು ತನ್ನ ಹಕ್ಕನ್ನು ಚಲಾಯಿಸದೆ ಇದ್ದದ್ದರಿಂದ, ಅದು ಅವನ ಪತ್ರಿಕೆಯ ಬರಹಕ್ಕೆ ಹೋಲುವಂಥದ್ದಾಗಿದೆ. *ಕ್ರಿಸ್ತನಿಗಾಗಿ, ಕ್ರೈಸ್ತರು ತನ್ನ ಹಕ್ಕನ್ನು ಬಿಟ್ಟುಕೊಡುವದಕ್ಕೂ ಸಿದ್ಧನಿರಬೇಕು ಎಂಬ ತತ್ವವು ಇಲ್ಲಿ ಒಳಗೊಂಡಿರುತ್ತದೆ.* ಉದಾಹರಣೆಗೆ, 1 ಕೊರಿಂಥದ ಅವನ ಮಾತುಗಳನ್ನು ಗಮನಿಸಿರಿ: ಅಧ್ಯಾಯ 6ರಲ್ಲಿ, ನಷ್ಟವನ್ನು ಯಾಕೆ ತಾಳಬಾರದು? ಇದರಿಂದ ಸಭೆಗೆ ಒಳಿತಾಗುವದಿಲ್ಲವೇ? ಅನ್ಯಾಯವನ್ನು ಯಾಕೆ ಸಹಿಸಬಾರದು? (ವಚನ 7ಬಿ). ಅಧ್ಯಾಯ 8ರಲ್ಲಿ, ಭೋಜನ ಪದಾರ್ಥದಿಂದ ನನ್ನ ಸಹೋದರನಿಗೆ ವಿಘ್ನವಾಗುವದಾದರೆ ನಾನು ಎಂದಿಗೂ ಮಾಂಸವನ್ನು ತಿನ್ನುವದಿಲ್ಲ (ವಚನ 13).[12] ಅಧ್ಯಾಯ 9ರಲ್ಲಿ, ಸಭೆಯ ಒಳಿತಿಗಾಗಿ ತಾನು ಸಭೆಯವರಿಂದ ಯಾವುದೇ ಹಣದ ಸಹಾಯವನ್ನು ಹೊಂದಲಿಲ್ಲ ಎಂದು ಹೇಳಿದನು (ವಚನಗಳು 1-23).

ಕೆಲವು ಸಂದರ್ಭಗಳಲ್ಲಿ ಪೌಲನು ತನ್ನ ರೋಮಾಪುರದ ಹಕ್ಕನ್ನು ನಿರಾಕರಿಸಿದನು, ಇದಕ್ಕೆ ಕಾರಣವೇನು? ಈ ಪ್ರಶ್ನೆಯನ್ನು ಕೂಲಂಕುಷವಾಗಿ ಪರಿಶೀಲಿಸೋಣ. ಆ ಹಕ್ಕನ್ನು ನಿರಾಕರಿಸಿದನು ಮತ್ತು ಅದನ್ನು ಚಲಾಯಿಸಲಿಲ್ಲ. ಏಕೆ? ಪೌಲನ ರೋಮಾಪುರದ ಹಕ್ಕಿನ ಬಗ್ಗೆ ಆಲೋಚಿಸುವಾಗ, ಅವನು ಅದನ್ನು ತನ್ನ ವೈಯಕ್ತಿಕ ಒಳತಿಗಾಗಿ ಮಾಡದೆ ಕ್ರಿಸ್ತನಿಗಾಗಿ ಮಾಡಿದನು. ಅಧ್ಯಾಯ 16ರಲ್ಲಿ ಈ ಸಂಗತಿಗಳನ್ನು ನಾನು ಗಮನಿಸಿರುವೆನು:

ಅಧಿಕಾರಗಳ ಮೇಲಿನ ಮತ್ಸರದಿಂದ, ಪೌಲನು ತನ್ನ ರೋಮಾಪುರದ ಹಕ್ಕನ್ನು

> ಚಲಾಯಿಸದೆ ಇರಲಿಲ್ಲ (ರೋಮಾಪುರ 12:17, 19). ಆದರೆ ತಾನು ಬಿಟ್ಟು ಹೋಗ ಲಿದ್ದ ಯೌವನಸ್ಥ ಸೇವಕರಿಗೆ ಇದನ್ನು ನಿದರ್ಶನವನ್ನಾಗಿ ಬಿಟ್ಟು ಹೋದನು. ಅವರು ಹೊಂದಲಿಕ್ಕಿದ್ದ ಸಂಕಟಗಳ ನಡುವೆ (ಫಿಲಿಪ್ಪಿ 1:28-30), ಅವರ ನಾಯಕನ ವಿಚಾರಣೆ, ಏಟುಗಳು, ಸೆರೆಮನೆ ವಾಸಗಳ ಬಗ್ಗೆ ವಿವರಿಸಲು ಅವರು ನಾಚಿಕೆಯುಳ್ಳ ವರಾಗದಂತೆ ಮಾಡಿತು.

ಪೌಲನು, ತಾನು ಚಡಿಗಳಿಂದ ತಪ್ಪಿಸಿಕೊಂಡ ವಿಚಾರದ ಬಗ್ಗೆ ಕೆಲವು ಅಂಶಗಳನ್ನು ಒತ್ತಿ ಹೇಳುತ್ತೇನೆ:

> ಅಪೊಸ್ತಲರ ಕೃತ್ಯಗಳು 21ರಲ್ಲಿ ಕರ್ತನಿಗಾಗಿ ಕಾರಣಗಳು ಇಲ್ಲದೆ ಇದ್ದದ್ದರಿಂದ ಪೌಲನು ತನ್ನ ಹಕ್ಕನ್ನು ಪ್ರತಿಪಾದಿಸಿದನು, ಅವನಿಗೆ ಮರಣ ಉಂಟಾಗಬಹುದೆಂದು ಹೇಳಿದನು. ಅವನು ರಕ್ತಸಾಕ್ಷಿಯಾಗ ಬೇಕೆಂಬ ಭಾವನೆಯನ್ನು ಹೊಂದದೆ ಇದ್ದರೂ, ಅದು ದೇವರ ಚಿತ್ತವಾಗಿದ್ದರೆ, ಸಾಯಲೂ ಸಿದ್ಧನಿದ್ದನು (ಅಪೊಸ್ತಲರ ಕೃತ್ಯಗಳು 21:13; ಫಿಲಿಪ್ಪಿ 1:21, 23). ಆದರೆ ಅನಗತ್ಯವಾಗಿ ತನ್ನ ಜೀವಿತವನ್ನು ವ್ಯರ್ಥಮಾಡಿಕೊಳ್ಳಲು ಅವನು ಇಚ್ಚಿಸಲಿಲ್ಲ.

ಪೌಲನು ತನ್ನ ಪಿರ್ಯಾದನ್ನು ಕೈಸರನ ಮುಂದೆ ಹೇಳುವೆನು ಎಂಬ ಹಕ್ಕನ್ನು ಚಲಾಯಿಸಿದ್ದರಿಂದ ಹಿರಿಸಭೆಯವರ ಶಿಕ್ಷೆಯನ್ನು ತಪ್ಪಿಸಿಕೊಂಡನು ಮತ್ತು ಅವನು ರೋ ಮಾಯಕ್ಕೆ ಹೋಗುವ ಅವಕಾಶವನ್ನು ಸಹ ಪಡೆದನು (23:11). ಪೌಲನ ಈ ಅಪೀಲಿನ ಮೂಲಕ ದೇವರು ದಯಪಾಲಿಸಿದ ತಾತ್ಕಾಲಿಕ ಸಂರಕ್ಷಣೆಯನ್ನು ಸಹ ಗಮನಿಸುತ್ತೇವೆ - ಮತ್ತು ಇದರಲ್ಲಿ ದೇವರ ಅನೇಕ ವಿಧವಾದ ಲಾಭ ಮತ್ತು ಉದ್ದೇಶಗಳು ಸಹ ಇದ್ದವು, ಗೊಂದಲ ಮಯವಾದ ಒಂದು ವಿಚಾರವನ್ನು ಸರಳೀಕರಿಸಲು ಪ್ರಯತ್ನಿಸುವಾಗ, ಕರ್ತನ ದೃಷ್ಟಿಯಲ್ಲಿ ಲಾಭದಾಯಕವಾದ ಅಂಶವು ಉದ್ಭವಿಸುವಾಗ ಪೌಲನು ತನ್ನ ರೋಮಾಪುರದ ಹಕ್ಕನ್ನು ಪ್ರತಿಪಾದಿಸಿದನು, ಆದರೆ ತನ್ನ ಸ್ವಾರ್ಥಕ್ಕಾಗಿ, ತನ್ನ ಇಚ್ಛೆಗನುಗುಣವಾಗಿ ಅಥವಾ ಸ್ವ ತೃಪ್ತಿಗಾಗಿ ಅದನ್ನು ಬಳಸಲಿಲ್ಲ.

ಹಕ್ಕುಗಳ ಕುರಿತ ಪೌಲನ ಆಲೋಚನೆಗೆ ತಕ್ಕಂತೆ, ಕೆಲವು ಸಲಹೆ ಸೂಚನೆಗ ಳನ್ನು ನಾವು ಕಲಿಯೋಣ:

(1) ನಿಮಗಿರುವ ಹಕ್ಕುಗಳಿಗಾಗಿ ಕೃತಜ್ಞರಾಗಿರಿ. ಅದರಲ್ಲಿ ಕೆಲವು ಸಹಜವಾ ದದ್ದಾಗಿದ್ದರೆ, ಇನ್ನು ಕೆಲವು "ಮಾನವ" ಹಕ್ಕುಗಳಾಗಿರುತ್ತವೆ. "ಅಮೇರಿಕೆಯ ಸ್ವತಂತ್ರದ ಹಕ್ಕುಗಳೇನೆಂದರೆ, ಜೀವನ ಸ್ವತಂತ್ರ ಹಾಗೂ ಆನಂದ"[13] ರಾಷ್ಟ್ರವು ಇನ್ನು ಇತರೆ ಮೂರು ಹಕ್ಕುಗಳನ್ನು ನೀಡಿರುತ್ತದೆ.[14] ವಾಕ್ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಸಭೆಯಾಗಿ ಕೂಡಿ ಬರುವ ಹಕ್ಕು.[15] "ಬೇಗನೇ ವಿಚಾರಣೆಯನ್ನು ಮಾಡುವ" ರಾಷ್ಟ್ರೀಯ ಹಕ್ಕನ್ನು ನೀಡಿರುತ್ತದೆ.[16] ಇತರೆ ರಾಷ್ಟ್ರಗಳು ಅಂದರೆ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಸಹ, ರಾಷ್ಟ್ರೀಯ ಹಕ್ಕುಗಳನ್ನು ನೀಡಿರುತ್ತವೆ. ನಿಮ್ಮ ದೇಶಗಳಲ್ಲೂ ಈ ಹಕ್ಕುಗಳು ಇರಬಹುದು, ಅವುಗಳಿಗಾಗಿ ಕೃತಜ್ಞರಾ ಗಿರಿ.[17]

(2) ಪೌಲನ ಈ ನಿದರ್ಶನದ ಮೂಲಕ, ಒಬ್ಬ ಕ್ರೈಸ್ತನು ತನ್ನ ಪೌರತ್ವದ ಹಕ್ಕನ್ನು ಸಮರ್ಥಿಸಿಕೊಳ್ಳಬಹುದು ಎಂದು ನೋಡುತ್ತೇವೆ ಮತ್ತು ಇದು ವಾಕ್ಯಕ್ಕನು ಗುಣವಾಗಿರುತ್ತದೆ. ಅದು ದೇವರ ರಾಜ್ಯಕ್ಕೆ ಸಮ್ಮತ್ತವೂ ಸಹ ಆಗಿರುತ್ತದೆ.[18]

(3) ಜೀವಿತದಲ್ಲಿ "ಪಡೆದುಕೊಳ್ಳಬೇಕಾದ ಸಂಗತಿಗಳು ಮಾತ್ರ ಪ್ರಮುಖವಾಗಿರುವದಿಲ್ಲ." ಲೋಕದಾದ್ಯಂತ ಕೋಪಿಷ್ಟರಾದ ಜನರು "ತಾವು ಉತ್ತಮವಾದದ್ದನ್ನೇ ಪಡೆಯಬೇಕೆಂದು" ತಮ್ಮ ಮುಷ್ಟಿಗಳನ್ನು ಅಲುಗಾಡಿಸುತ್ತಾ ಕೂಗುತ್ತಿರುತ್ತಾರೆ. ನಾನು ಅದರ ಹಕ್ಕನ್ನು

ಹೊಂದಿರುವದರಿಂದ, ಅದನ್ನು ನಾನು ಪಡದೇ ತೀರುತ್ತೇನೆ ಎಂದು ಹೇಳುತ್ತಾರೆ - ಇದರಿಂದ ನನ್ನ ಜೀವಿತವು ವೃದ್ಧಿಯಾಗುತ್ತದೆ. "ಆದರೆ ನನ್ನ ದೇಶಕ್ಕೆ ಉತ್ತಮ ಸಂಗತಿಗಳು ಆಗಬೇಕೆಂಬ" ಬಯಕೆಯುಳ್ಳ ಜನರ ಅಗತ್ಯವು ಪ್ರಮುಖವಾಗಿರುತ್ತದೆ. ನನ್ನ ಹಕ್ಕುಗಳನ್ನು ನಾನು ಅರಿತಿದ್ದೇನೆ. ನನ್ನ ದೇಶದ ಬಲವರ್ಧನೆಗಾಗಿ ಯಾವ ತ್ಯಾಗಕ್ಕೂ ಸಿದ್ಧನಿದ್ದೇನೆ ಎಂಬುವವರ ಅಗತ್ಯವಿದೆ. ತಮ್ಮ ಕುಟುಂಬಕ್ಕಾಗಿ, ಸಭೆಗಾಗಿ, ಹಾಗೂ ತಮ್ಮ ಸಮಾಜದ ಒಳಿತಿಗಾಗಿ ತ್ಯಾಗ ಮಾಡುವ ಕ್ರೈಸ್ತರ ಅಗತ್ಯವು ಇರುತ್ತದೆ!

## ಹಕ್ಕುದಾರನಾದ ಒಬ್ಬ ಪೌರನ ಜವಾಬ್ದಾರಿಗಳು

ಒಂದು ದೇಶದ ಪೌರತ್ವ ಹೊಂದಿರುವವರಿಗೆ, ಕೆಲವು ನಿಯಮಾವಳಿಗಳು ಅನ್ವಯಿಸುವದರಿಂದ ಅವರು ತಮ್ಮ ಜವಾಬ್ದಾರಿಗಳಿಂತ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಒಬ್ಬನು ತನ್ನ ಹೊಣೆಯನ್ನು ಅರಿಯದೆ ಹೋದರೆ, ಅವನುತನ್ನ ಹಕ್ಕುಗಳನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ.

ಉದಾಹರಣೆಗೆ, ಒಬ್ಬ ಪೌರನಿಗೆ, ತನ್ನ ಸರ್ಕಾರದ ಜವಾಬ್ದಾರಿ ಇರುತ್ತದೆ:

> ನಮ್ಮ ಮೂಲ ಜವಾಬ್ದಾರಿಗಳನ್ನು ಮೂರು ಪದಗಳಲ್ಲಿ ವಿವರಿಸಬಹುದು - ಸಂದಾಯ, ಪ್ರಾರ್ಥನೆ, ಹಾಗೂ ವಿಧೇಯತೆ: (1) ನಾವು ನಮ್ಮ ಸುಂಕವನ್ನು ಸಂದಾಯಿಸಬೇಕು. ಮತ್ತಾಯ 22:17-21ರಲ್ಲಿ ಯೇಸು ಇದನ್ನು ಸ್ಪಷ್ಟಪಡಿಸಿರುವನು, ಮತ್ತು ರೋಮಾಪುರ 13:6, 7ರಲ್ಲಿ, ಪೌಲನು ಸಹ ಈ ವಿಚಾರವನ್ನು ಒತ್ತಿ ಹೇಳಿರುವನು (2) ನಾವು ನಮ್ಮ ಮೇಲಿನ ಅಧಿಕಾರಿಗಳಿಗಾಗಿ ಪ್ರಾರ್ಥಿಸಬೇಕು (1 ತಿಮೊಥೆ 2:1, 2). (3) ದೇಶದ ನಿಯಮಗಳನ್ನು ಪಾಲಿಸಬೇಕು.[19] ಪೌಲನ ಸರಳವಾದ ಬೋಧನೆಯ ಸಂಗಡ (ರೋಮಾಪುರ 13:1-5). ಪೇತ್ರನು, "ಮನುಷ್ಯರು ನೇಮಿಸಿರುವ ಯಾವ ಅಧಿಕಾರಕ್ಕಾದರೂ ಕರ್ತನ ನಿಮಿತ್ತ ಅಧೀನರಾಗಿರಿ ಇದು ದೇವರ ಚಿತ್ತವಾಗಿದೆ ..." (1 ಪೇತ್ರ 2:13-15) ಎಂದು ಬರೆದನು.

ನಾವು ಉತ್ತಮವಾದ ಪೌರರಾಗಿ, ನಾವು ಒಂದು ದೇಶದ ಹಕ್ಕುದಾರರು ಎಂದು ನಿರೂಪಿಸಬಹುದು. ಅಧಿಕಾರದ ಕುರಿತು ಪೌಲನು ಬರೆಯುವಾಗ, "ನೀನು ಅಧಿಕಾರಿಗೆ ಭಯಪಡದೆ ಇರಬೇಕೆಂದು ಅಪೇಕ್ಷಿಸುತ್ತೀಯಾ? ಒಳ್ಳೆದನ್ನು ಮಾಡು; ಆಗ ಅಧಿಕಾರಿಯಿಂದಲೇ ನಿನಗೆ ಹೊಗಳಿಕೆಯುಂಟಾಗುವದು" (ರೋಮಾಪುರ 13:3). ಪೇತ್ರನು ಬರೆದಿರುವ ಹಾಗೆ,

> ಮನುಷ್ಯರು ನೇಮಿಸಿರುವ ಯಾವ ಅಧಿಕಾರಕ್ಕಾದರೂ ಕರ್ತನ ನಿಮಿತ್ತ ಅಧೀನರಾಗಿರಿ. ಅರಸನು ಸರ್ವಾಧಿಕಾರಿ ಎಂತಲೂ ಬೇರೆ ಅಧಿಪತಿಗಳು ಕೆಟ್ಟ ನಡತೆಯುಳ್ಳವರನ್ನು ದಂಡಿಸುವದಕ್ಕೂ ಒಳ್ಳೇ ನಡತೆಯುಳ್ಳವರನ್ನು ಪ್ರೋತ್ಸಾಹ ಪಡಿಸುವದಕ್ಕೂ ಅರಸನಿಂದ ಕಳುಹಿಸಲ್ಪಟ್ಟವರೆಂತಲೂ ತಿಳಿದು ಅವರಿಗೆ ಅಧೀನರಾಗಿರಿ. ತಿಳಿಯದೆ ಮತಾಡುವ ಮೂಢಜನರ ಬಾಯನ್ನು ನೀವು ಒಳ್ಳೇ ನಡತೆಯಿಂದ ಕಟ್ಟಬೇಕೆಂಬದೇ ದೇವರ ಚಿತ್ತ (1 ಪೇತ್ರ 2:13-15).

ಪೌಲನು ಹಿರಿ ಸಭೆಯ ಮುಂದೆ ನಿಂತಾಗ - ಸಹೋದರರೇ, ನಾನು ಈ ದಿನದವರೆಗೂ ಒಳ್ಳೆ ಮನಸ್ಸಾಕ್ಷಿಯಿಂದ ದೇವರ ಮುಂದೆ ನಡೆದು ಕೊಂಡಿದ್ದೇನೆ ಅಂದನು (ಅಪೊಸ್ತಲರ ಕೃತ್ಯಗಳು 23:1ಬಿ). ಅಕ್ಷರಶಃ, ಪೌಲನು ಹೇಳಿದ್ದೇನೆಂದರೆ, "ನಾನು ಈ ದಿನದವರೆಗೂ ದೇವರ ಮುಂದೆ, ಒಳ್ಳೆಯ ಮನಸ್ಸಾಕ್ಷಿಯ ಪೌರನಾಗಿ ಜೀವಿಸಿರುವೆನು" (ಒತ್ತಿ ಹೇಳಿದ್ದು ನನ್ನದು).[20] ಪೌಲನು ರೋಮಾಯದ, ತಾರ್ಸದ ಹಾಗೂ ಯೆಹೂದ್ಯ ಹಕ್ಕುದಾರನಾಗಿದ್ದರೂ (21:39), ಅವನು ಧಾರ್ಮಿಕವಾಗಿಯೂ, ರಾಜಕೀಯವಾಗಿಯೂ ಮುಗ್ದನಾಗಿದ್ದನು.

ಕ್ರೈಸ್ತರ ನೇರವಾದ ಹೊಣೆಗಾರಿಕೆಯು ರಾಷ್ಟ್ರಕ್ಕೆ ಬಲವನ್ನು ನೀಡುತ್ತದೆ: ಜೀವಿ ಸುವದಕ್ಕಾಗಿ ಕೆಲಸಮಾಡುವದು (2 ಥೆಸಲೋನಿಕ 3:10), ನಿನ್ನ ಚಿಂತನೆಯನ್ನು ನೀನೇ ಮಾಡಬೇಕು (1 ತಿಮೊಥೆ 5:8). ಇತರರ ಹಕ್ಕುಗಳನ್ನು ಸನ್ಮಾನಿಸಬೇಕು (1 ಕೊರಿಂಥ 13:5). ಬಲವಾದ ಕುಟುಂಬಗಳನ್ನು ಕಟ್ಟಬೇಕು (ಎಫೆಸ 5:22-6:4); ಸಮಾಧಾನದ ಜೀವಿತವನ್ನು ಜೀವಿಸಿರಿ (ರೋಮಾಪುರ 12:18); ಮುಂತಾದವು ನೀತಿವಂತರಾಗಿರುವದೇ ಕ್ರೈಸ್ತರು ದೇಶಕ್ಕೆ ನೀಡುವ ಉತ್ತಮವಾದ ಕೊಡುಗೆಯಾಗಿದೆ (ಜ್ಞಾನೋಕ್ತಿ 14:34)![21]

ಅಪೊಸ್ತಲರ ಕೃತ್ಯದಲ್ಲಿ ಯಾವುದೇ ಕ್ರೈಸ್ತರು ದೊಂಬಿಯನ್ನಾಗಲೀ, ಒಳಸಂಚನ್ನಾಗಲೀ, ದಂಗೆಯನ್ನಾಗಲೀ, ಉಂಟುಮಾಡಲಿಲ್ಲ. ಇತರರು ಈ ಕೃತ್ಯ ಗಳನ್ನು ನಡೆಸಿ, ಕ್ರೈಸ್ತರ ಮೇಲೆ ಅಪಾದನೆ ಮಾಡಿದರು, ಆದರೆ ಕ್ರೈಸ್ತರು ದೇವರಿಗೆ ಭಯಪಡುವವರಾಗಿದ್ದು, ಅವರು ದೇಶದ ಕಾನೂನಿಗೆ ಬದ್ಧರಾಗಿದ್ದರು. ಒಬ್ಬ ಒಳ್ಳೆಯ ಕ್ರೈಸ್ತನು ಉತ್ತಮವಾದ ಪ್ರಜೆಯಾಗಿದ್ದನು ಎಂದು ಲೂಕನು ಪ್ರಪಂಚಕ್ಕೆ ತಿಳಿಸಿದನು.

## ಮುಕ್ತಾಯ

"ನಾನು ಈ ದೇಶದ ಪ್ರಜೆಯಾಗಿರುವದರಿಂದ ನಾನು ಸಂತೋಷವುಳ್ಳವನಾಗಿದ್ದೇನೆ" ಎಂದು ನೀವು ಹೇಳಬಹುದೆಂದು ನಾನು ಬಯಸುತ್ತೇನೆ. ನೀವುಗಳು ಉತ್ತಮವಾದ ಪ್ರಜೆಗ ಳಾಗಿ ವರ್ತಿಸುವಿರೆಂದು ತಿಳಿದಿದ್ದೇನೆ.

ಪ್ರಾಪಂಚಿಕ ಪೌರತ್ವವು ಎಷ್ಟು ಪ್ರಮುಖವೋ, ಪರಲೋಕದ ಪೌರತ್ವವು ಕೂಡ ಅದಕ್ಕಿಂತ ಹೆಚ್ಚು ಪ್ರಾಮುಖ್ಯವಾಗಿದೆ![22] ರೋಮಾ ಸಾಮ್ರಾಜ್ಯದ ಪ್ರಜೆಗಳಾಗಿದ್ದರಿಂದ, ಫಿಲಿಪ್ಪಿಯವರು ಹೆಚ್ಚಳ ಪಟ್ಟುಕೊಂಡರು, ಆದರೆ ಪೌಲನು ಅವರಿಗೆ, "ನಾವಾದರೋ ಪರಲೋಕ ಸಂಸ್ಥಾನದವರು, ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರು ನೋಡುತ್ತಾ ಇದ್ದೇವೆ" ಅಂದನು (ಫಿಲಿಪ್ಪಿ 3:20). ಎಫೆಸದವರಿಗೆ ಅವನು ತಿಳಿಸಿದ್ದೇನೆಂದರೆ, "ದೇವಜನರೊಂದಿಗೆ ಒಂದೇ ಸಂಸ್ಥಾನದವರು" (ಎಫೆಸ 2:19ಬಿ). "ಪರದೇಶದವರು, ಪ್ರವಾಸಿಗಳು ಆಗಿದ್ದೇವೆ" (ಇಬ್ರಿಯ 11:13). "ಆದರೆ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ" (ಲೂಕ 10:20ಸಿ; ಇಬ್ರಿಯ 12:23; ಪ್ರಕಟನೆ 13:8; 20:12, 15; 21:27).

ಪರಲೋಕ ಸಂಬಂಧವಿರುವ ಸಕಲ ಹಕ್ಕುಬಾದ್ಯತೆಗಳ ಕುರಿತು ಬರೆಯಲು ಸಮಯಾವಕಾಶವು ನನಗಿರುವದಿಲ್ಲ. ನಾವು ದೇವರನ್ನು ತಂದೆಯೆಂದು ಕರೆಯುವ ಹಕ್ಕುದಾರರಾಗಿದ್ದೇವೆ (ಮತ್ತಾಯ 6:9). ದೇವರ ವಾಗ್ದಾನಗಳನ್ನು ನಮ್ಮದಾಗಿಸಿ ಕೊಳ್ಳುವ ಹಕ್ಕುಳ್ಳವರಾಗಿದ್ದೇವೆ (ಇಬ್ರಿಯ 8:6; 2 ಪೇತ್ರ 1:4). ದೇವರ ಆಶೀರ್ವಾದಗಳು ನಮ್ಮದಾಗಿವೆ (ಎಫೆಸ 1:3). "ಆತನ ಪ್ರಜೆಗಳಾಗಿ, ಉತ್ತಮವಾದ ದೇಶಕ್ಕೆ ಪ್ರಯಾಣ ಮಾಡುವವರಾಗಿದ್ದೇವೆ, ಅದು ಪರಲೋಕ ರಾಜ್ಯವೇ" (ಇಬ್ರಿಯ 11:16ಎ; ಇಬ್ರಿಯ 13:14).

ನಮ್ಮ ಹಕ್ಕುಗಳೊಂದಿಗೆ ಜವಾಬ್ದಾರಿಗಳು ಸಹ ಹೆಣೆದುಕೊಂಡಿರುತ್ತವೆಂದು ಪೌಲನು ಫಿಲಿಪ್ಪಿಯವರಿಗೆ, "ಅವರು ಪರಲೋಕ ಸಂಸ್ಥಾನದವರು" (ಫಿಲಿಪ್ಪಿ 3:20ಎ). ಎಂದು ತಿಳಿಸಿ, ಆ ಕ್ರಿಸ್ತನ ಸುವಾರ್ತೆಗೆ ಯೋಗ್ಯರಾಗಿ ಜೀವಿಸಿರಿ ಅಂದನು (ಫಿಲಿಪ್ಪಿ 1:27ಎ). ಅಕ್ಷರಶಃ ಅವನು "ನೀವು ಉತ್ತಮವಾದ ಪ್ರಜೆಗಳಾಗಿ ಜೀವಿಸಿರಿ" ಎಂದಿರುವನು (BVNT ಒತ್ತಿ ಹೇಳಿದ್ದು ನನ್ನದು).[23] ಪರಲೋಕ ಸಂಸ್ಥಾನದವರಾಗಿ ಜೀವಿಸಲು, ದೇವರ ವಾಕ್ಯಕ್ಕೆ ಮನ್ನಣೆಯನ್ನು ನೀಡಬೇಕಾಗುತ್ತದೆ (ಅಪೊಸ್ತಲರ ಕೃತ್ಯಗಳು 17:11). ಬಲಹೀನರನ್ನು ಸಂತೈಸಬೇಕಾಗುತ್ತದೆ (2 ಕೊರಿಂಥ 1:3, 4), ದೇವ ಜನರೊಂದಿಗೆ ಕೂಡಿ ಬರಬೇಕಾಗುತ್ತದೆ (ಇಬ್ರಿಯ 10:25), ಮತ್ತು ಶ್ರೇಷ್ಠ ಹೋರಾಟವನ್ನು ಮಾಡಬೇಕಾಗತ್ತದೆ (1 ತಿಮೊಥೆ 6:12).[24]

ಪ್ರಾಪಂಚಿಕವಾದ ಪೌರತ್ವದ ಬಗ್ಗೆ ನಿಮಗೆ ಆಯ್ಕೆ ಇಲ್ಲದೆ ಇರಬಹುದು,

ಆದರೆ ಪರಲೋಕದ ಪೌರತ್ವದ ಬಗ್ಗೆ ನೀವು ಆಯ್ಕೆ ಮಾಡಿಕೊಳ್ಳಬಹುದು. ಅ ಪರಲೋಕದ ಪೌರತ್ವವನ್ನು, ಹಾಗೂ ಹಕ್ಕನ್ನು ಆಯ್ಕೆ ಮಾಡಲು ನಿಮಗೆ ಸದಾವಕಾಶವಿದೆ. ನೀವು ದೇವರ ರಾಜ್ಯದ ಪೌರತ್ವವನ್ನು ಹೊಂದದೆ ಇದ್ದರೆ, [25] ನೀವು "ಹೊಸಬರಾಗಿರಿ" ಎಂದು ಮನವಿ ಮಾಡುತ್ತೇನೆ (ಯೋಹಾನ 3:3). ದೇವರ ಪ್ರೇರಿತವಾದ ವಾಕ್ಯದ ಪ್ರಕಾರ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ (ಅಪೊಸ್ತಲರ ಕೃತ್ಯಗಳು 2:38). ಯೇಸು ಹೇಳಿದ್ದು, "ಒಬ್ಬನು ನೀರಿ ನಿಂದಲೂ, ಆತ್ಮದಿಂದಲೂ ಹೊಸದಾಗಿ ಹುಟ್ಟದೆ ಹೋದರೆ, ಅವನು ದೇವರ ರಾಜ್ಯವನ್ನು ಸೇರಲಾರನು" (ಯೋಹಾನ 3:5).

ನೀವು ಈಗಾಗಲೇ, ಆತನ ರಾಜ್ಯದ ಪ್ರಜೆಗಳಾಗಿದ್ದರೆ, "ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವಗಳನ್ನು ಹುಡುಕಿರಿ. ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಅಸನಾರೂಢನಾಗಿದ್ದಾನೆ. ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ. ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ" (ಕೊಲೊಸ್ಸೆ 3:1, 2ಬಿ). ಇನ್ನೊಂದು ವಿಧದಲ್ಲಿ ಹೇಳುವದಾದರೆ, ನೀವು ಪರಲೋಕದ ಸಂಸ್ಥಾನದವನಾಗಿದ್ದರೂ, ನೀವು ಉತ್ತಮವಾದ ಪ್ರಜೆಗಳಾಗದಿದ್ದರೆ, ನೀವು ಎಲ್ಲಿಂದ ಬಿದ್ದಿರುವಿರೆಂದು ನೆನಪು ಮಾಡಿಕೊಳ್ಳಿರಿ, ಮಾನಸಾಂತರ ಪಟ್ಟು, ಮೊದಲು ಮಾಡುತ್ತಿದ್ದ ಕಾರ್ಯಗಳನ್ನು ಮಾಡಿರಿ (ಅಪೊಸ್ತಲರ ಕೃತ್ಯಗಳು 2:5; ಅಪೊಸ್ತಲರ ಕೃತ್ಯಗಳು 8:22)!

ನೀವು ಸಹ ನನ್ನ ಸಂಗಡ ಉತ್ತಮ ಪ್ರಜೆಗಳಾದರೆ; ಒಂದು ದಿವಸ ನಾನು ನಿಮ್ಮನ್ನು ಪರಲೋಕದಲ್ಲಿ ಸಂಧಿಸುತ್ತೇನೆ!

---

ಟಿಪ್ಪಣಿಗಳು

[1]ಕ್ರಿಸ್ಟೀನ ಬುನಿಯರ ಸಂದರ್ಶನ 1994. [2]ಹೊಸ ಒಡಂಬಡಿಕೆಯಲ್ಲಿರುವ, ಪ್ರಜೆ ಸಂಸ್ಥಾನದವರು ಎಂಬ ಪದಗಳಿಗೆ ಗ್ರೀಕ್ ಭಾಷೆಯ "ಪೋಲಿಸ್" ಎಂಬ ಪದ ಮೂಲವಾಗಿದೆ (ಸಿಟಿ ಎಂಬುದರಿಂದ ಸಿಟಿಜನ್). [3]ರೋಡ್ ಟು ಡಿ ಸೈಪಲ್ ಪಾಠವನ್ನು ನೋಡಿರಿ *ಅಪೊಸ್ತಲರ ಕೃತ್ಯಗಳು, 2ನೇ.* [4]ಅಪೊಸ್ತಲರ ಕೃತ್ಯಗಳು 16:35-40; *ಅಪೊಸ್ತಲರ ಕೃತ್ಯಗಳು, 4ನೇ* ಪಾಠ ನೋಡಿರಿ. [5]ಅಪೊಸ್ತಲರ ಕೃತ್ಯಗಳು 22:24-29; *ಅಪೊಸ್ತಲರ ಕೃತ್ಯಗಳು, 5ನೇ* ಪಾಠ ನೋಡಿರಿ. [6]ಅಪೊಸ್ತಲರ ಕೃತ್ಯಗಳು 25:10-12; *ಅಪೊಸ್ತಲರ ಕೃತ್ಯಗಳು, 5ನೇ* ಪಾಠ. [7]G. H. Trever, "Citizenship," *International Standard Bible Encyclopedia*, ed. James Orr (Grand Rapids, Mich.: Wm. B. Eerdmans Publishing Co., 1960), 1:661. [8]ಪ್ರಪಂಚದ ಕೆಲವು ಪ್ರದೇಶಗಳಲ್ಲಿ, ಇಂತಹ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಾರೆ. [9]J. W. McGarvey, *New Commentary on Acts of Apostles,* vol. 2 (Delight, Ark.: Gospel Light Publishing Co., n.d.), 221-22. [10]R. B. Rackham, *The Acts of the Apostles* (Grand Rapids, Mich.: Baker Book House, 1964), 452.

[11]ನ್ಯಾಯಾಧಿಪತಿಯು ಅವರ ಹಕ್ಕಿನ ಬಗ್ಗೆ ಮೊದಲು ತಿಳಿದಿರಲಿಲ್ಲ. [12]1 ಕೊರಿಂಥ 8, 10ರಲ್ಲಿ ವಿಗ್ರಹಗಳಿಗೆ ಸಮರ್ಪಿಸಿದ ಮಾಂಸದ ವಿಷಯ ಸಾರ್ವಜನಿಕ ಮಾರಾಟದಲ್ಲಿ, ಉತ್ತಮವಾದ ಮಾಂಸವನ್ನು ಮೊದಲು ವಿಗ್ರಹಗಳಿಗೆ ಸಮರ್ಪಿಸುವದು ವಾಡಿಕೆ ಯಾಗಿತ್ತು. ಹೊಸ ಕ್ರೈಸ್ತರಿಗೆ ಇದು ವಿಷ್ಣವಾಗಿತ್ತು, ಆದ್ದರಿಂದ ಮಾಂಸವನ್ನು ತಿನ್ನುವದನ್ನು ಬಿಡಲು ಅವರಿಗೆ ಕಷ್ಟಕರವಾಯಿತು. [13]ಆನಂದವು ಅವರ ಹಕ್ಕಾಗಿರದೆ ಇದ್ದರೂ - ಅದನ್ನು ಪಡೆಯುವ ಪ್ರಯತ್ನದ ಹಕ್ಕನ್ನು ಹೊಂದಿದ್ದರು. [14]ಅಮೇರಿಕೆಯ ಸಂವಿಧಾನದ ಮೊದಲ ಹತ್ತು ತಿದ್ದು ಪಾಟುಗಳು ಅಧ್ಯತೆಯ ಹಕ್ಕುಗಳಾಗಿವೆ. [15]ಇವುಗಳನ್ನು "ನಾಲ್ಕು ಸ್ವಾತಂತ್ರ" ಎನ್ನುವರು. [16]ಇದು ಆರನೆಯ ತಿದ್ದುಪಾಟಾಗಿದೆ. "ಅಪಾದನೆಯನ್ನು ತಿಳಿಯುವ ಅವಕಾಶ." [17]ರಾಜಕೀಯ ಹಾಗೂ ಸ್ವಾಭಾವಿಕವಾದ ಹಕ್ಕುಗಳ ಬಗ್ಗೆ ಕೇಳುಗರು ಕೇಳಬಯಸುತ್ತಾರೆ. ಇಷ್ಟಪಡದ ಹಕ್ಕುಗಳನ್ನು ಜನರು ಕೇಳಬಯಸುವದಿಲ್ಲ. [18]ಯೋಚನೆ ಮಾಡಬೇಕಾದ ಸಂಗತಿ: ಪೌಲನು ತನ್ನ ಕಾನೂನನ್ನು ಹಾಗೂ ಹಕ್ಕನ್ನು ಅರಿತಿದ್ದನು. ಇದರ ಕುರಿತಾದ ಮೂಲ ತಿಳುವಳಿಕೆಯು ಕ್ರೈಸ್ತರಿಗೆ ಅಗತ್ಯವಾಗಿದೆ. [19]ದೇವರ ನಿಯಮವನ್ನು ಮೀರುವ, ಲೌಕಿಕ ನಿಯಮಗಳನ್ನು ನಿರಾಕರಿಸಬಹುದು (ಅಪೊಸ್ತಲರ ಕೃತ್ಯಗಳು 5:29). [20]ಪೊಲಿಸ್ ಎಂಬ ಪದದಿಂದ "ಜೀವಿಸು"

ಎಂಬುದಾಗಿದೆ. ಅಪೊಸ್ತಲರ ಕೃತ್ಯಗಳು 23:1 ಟಿಪ್ಪಣಿ, *ಅಪೊಸ್ತಲರ ಕೃತ್ಯಗಳು, 5ನೇ* ಪುಸ್ತಕದಲ್ಲಿ ನೋಡಿರಿ.

[21]ಕ್ರೈಸ್ತರ ಪ್ರಾಥಮಿಕ ಹೊಣೆಗಳ ಬಗ್ಗೆ ವಿವರಿಸಬಹುದು. [22]ಕೇಳುಗರು ಒಂದು ವೇಳೆ ಸ್ವಾಭಾವಿಕ ಹಾಗೂ ರಾಜಕೀಯದ ಹಕ್ಕುಗಳಿಂದ ವಂಚಿತರಾಗಿ ದ್ದರೆ, ಲೌಕಿಕವಾದ ಹಕ್ಕುಗಳು ಇಲ್ಲದೆ ಹೋದರೂ, ಪರಲೋಕ ರಾಜ್ಯದ ಹಕ್ಕುಗಳ ಪಾಠದಲ್ಲಿರುವ ಆಶೀರ್ವಾದಗಳನ್ನು ಗಮನಿಸಬಹುದು. [23]ಪೊಲಿಸ್ ಎಂಬ ಗ್ರೀಕ್ ಪದದಿಂದ "ಯೊಗ್ಯವಾಗಿರಿ" ಎಂದು ಅನುವಾದಿಸಲಾಗಿದೆ. [24]ಪರಲೋಕ ಸಂಸ್ಥಾನದ ಬಗ್ಗೆ ಅಗತ್ಯಕ್ಕೆ ಅನುಗುಣವಾಗಿ ವಿವರಿಸಬಹುದು. [25]ಸಭೆಯ ಕುರಿತು ವಿವರಿಸಬಹುದು *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ ನೋಡಿರಿ.